**ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ-**

ನಾನು ಬಿ.ಕಾಂ ಪದವೀಧರ. ನಾನು ಕ್ರಯ ಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಎಂದು ಹೇಳಿದ್ದು, ಖರೀದಿದಾರರ ಪರವಾಗಿ ಸಹಿ ಮಾಡಿರುತ್ತೇನೆ. ಮಾರಾಟಗಾರರ ಪರಿಚಯವೂ ಸಹ ನನಗೆ ಇತ್ತು. ಅವರು ನಮ್ಮ ಪಕ್ಕದ ಊರಿನವರೆ ಆಗಿದ್ದರು. ಚನ್ನಮ್ಮ ಮತ್ತು ಕಾಳಯ್ಯ ರವರು ಅವಿದ್ಯಾವಂತರು ಎಂದರೆ ಸರಿ. ನಾನು ಅವರನ್ನು ನೋಡಿಯೆ ಇಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರನಾಗಿ ಸಹಿ ಮಾಡಲು ಹೋದಾಗ ಮಾರಾಟಗಾರರ ಪರಿಚಯ ಮಾಡಿಸಿದ್ದು ಯಾರು ಎಂದರೆ ನಾನು ಅವರ ಜೊತೆಯೆ ಹೋಗಿದ್ದು ಎನ್ನುತ್ತಾರೆ.

ಮನುಗನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಪ್ರಕಾಶ್ ರವರ ಪರಿಚಯ ಇದೆ. ಅವರು ಯಾವ ಯಾವ ಪತ್ರಗಳನ್ನು ಸಹಿ ಮಾಡಲು ಕೇಳಿಕೊಳ್ಳುತ್ತಾರೊ ಅವರ ಎಲ್ಲಾ ಪತ್ರಗಳಲ್ಲಿ ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರಕಾಶ್ ಮತ್ತು 2 ನೇ ಪ್ರತಿವಾದಿ ಮಹಿ ಮಹೇಶ್ ರವರು ಸ್ನೇಹಿತರು ಎಂದರೆ ಸಾಕ್ಷಿ ಪರಿಚಯಸ್ಥರು ಎನ್ನುತ್ತಾರೆ. 2 ನೇ ಪ್ರತಿವಾದಿ ಲೇ ಔಟ್ ಮಾಡಲು ಭೂ ಪರಿವರ್ತನೆಯನ್ನು ಶ್ರೀ ಪ್ರಕಾಶ್ ರವರ ಮೂಲಕ ಮಾಡಿಸಿರುತ್ತಾರೆ ಎಂದರೆ ಇರಬಹುದು ಎನ್ನುತ್ತಾರೆ. ನಾನು ಸಹಿ ಮಾಡಿರುವ ಕ್ರಯ ಪತ್ರ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿ ಪ್ರಿಂಟ್ ತೆಗೆದಿರುವಂತಹದ್ದು ಎಂದರೆ ಸರಿ . ಸದರಿ ಕ್ರಯ ಪತ್ರವನ್ನು ಎಲ್ಲಿ ಟೈಪ್ ಮಾಡಿ ಪ್ರಿಂಟ್ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಡೀಡ್ ಅನ್ನು ಟೈಪ್ ಮಾಡಲು ಮಾಹಿತಿಯನ್ನು ನೀಡಿದ್ದು, ಮಾರಾಟಗಾರರೆ ಇರುತ್ತಾರೆ.

ಕ್ರಯ ಪತ್ರದಲ್ಲಿ ಇಂಗ್ಲಿಷ್ ನಲ್ಲಿ ಬರವಣಿಗೆ ಮಾಡಲಾಗಿದೆ ಎಂದರೆ ಸರಿ. ಸದರಿ ಕ್ರಯ ಪತ್ರವನ್ನು ರಿಜಿಸ್ಟರ್ ಆಗುವ ಹಿಂದಿನ ಟೈಪ್ ಮಾಡಿಸಲಾಗಿತ್ತು. ಹಿಂದಿನ ದಿನ ಅದನ್ನು ಎಷ್ಟು ಗಂಟೆಗೆ ರೆಡಿ ಮಾಡಲಾಗಿತ್ತು ಎಂದು ನನಗೆ ಮಾಹಿತಿ ಇಲ್ಲ. ಮರು ದಿನ ಮಧ್ಯಾಹ್ನದ ವೇಳೆ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋಗಿದ್ದೇವು. ಕ್ರಯ ಪತ್ರವನ್ನು ಟೈಪ್ ಮಾಡಿಸಲು ಪತ್ರವನ್ನು ಯಾರ ಹೆಸರಿನಲ್ಲಿ ಖರೀದಿಸಿ ತರಲಾಗಿತ್ತು ಎಂದು ನನಗೆ

ಗೊತ್ತಿಲ್ಲ. ದಾಖಲೆ ಪತ್ರಗಳನ್ನು ಯಾರು ತಂದವರು ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ನಾನೆ ಮೊದಲನೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡುವ ಮೊದಲು ಮಾರಾಟಗಾರರು ಮತ್ತು ಕ್ರಯದಾರರು ಸಹಿ ಮಾಡಿದ್ದಾರೊ ಇಲ್ಲವೊ ಎಂದು ನೋಡಿದ್ದೆ ಅವರೂ ಸಹಿ ಮಾಡಿದ್ದರು. ಸದರಿ ರವರು ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ಸಹಿ ಮಾಡಿದ್ದರು. ಸಾಕ್ಷಿದಾರನಾಗಿ ನಾನು ಸಹಿ ಮಾಡುವ ಸಮಯದಲ್ಲಿ ದಾಖಲೆಯಲ್ಲಿ ಇರುವುದನ್ನು ಓದಲಿಲ್ಲ, ಆದರೆ ನನಗೆ ವಿಷಯ ಗೊತ್ತಿತ್ತು. ದಾಖಲೆ ಬರಹಗಾರರೆ ವಿಷಯವನ್ನು ಹೇಳಿದ್ದರು.1,38,000/- ರೂ. ಗಳಿಗೆ ಕ್ರಯದ ಮಾತುಕತೆ ಆಗಿರುತ್ತದೆ. ಸ್ವಲ್ಪ ಹಣವನ್ನು ನಗದಾಗಿ , ಸ್ವಲ್ಪ ಹಣವನ್ನು ಚೆಕ್ ಮೂಲಕ ಕೊಟ್ಟಿರುತ್ತಾರೆ. ಸದರಿ ಕ್ರಯದ ಹಣವನ್ನು ಚನ್ನಮ್ಮ ಮತ್ತು ಕಾಳಯ್ಯ ಅಂದರೆ ಮಾರಾಟಗಾರರೆ ತೆಗೆದುಕೊಂಡಿರುತ್ತಾರೆ. ಕಾಳಯ್ಯ ಮತ್ತು ಚನ್ನಯ್ಯ ಇಬ್ಬರ ಹೆಸರಿಗೂ ಚಕ್ ಕೊಟ್ಟಿರುತ್ತಾರೆ.

ಇನ್ನೊಬ್ಬ ಸಾಕ್ಷಿದಾರ ಸುರೇಶ್ ರವರ ಪರಿಚಯ ನನಗೆ ಇತ್ತು. ಅವರನ್ನು ಸಾಕ್ಷಿದಾರರಾಗಿ ಬರಬೇಕು ಎಂದು ಯಾರು ಕರೆದರು ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಹೆಸರಿನಲ್ಲಿ ಯಾವ ಯಾವ ಕ್ರಯ ಪತ್ರಗಳು ಇವೆ ಅವುಗಳಿಗೆಲ್ಲಾ ನಾನು ಮತ್ತು ಸುರೇಶ್ ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಕೇವಲ ಖರೀದಿದಾರರ ಪರವಾಗಿ ಸಹಿ ಮಾಡಿದ್ದೇನೆ ಹೊರತು ಮರಾಟಗಾರರ ಪರವಾಗಿ ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಇಬ್ಬರ ಪರವಾಗಿಯೂ ಸಹಿ ಮಾಡಿದ್ದೇನೆ ಎನ್ನುತ್ತಾರೆ. ನಿಡಿ. 53 ರಲ್ಲಿರುವ ಮಾರಾಟಗಾರರ ಸಹಿಗಳು ನಿಜವಾದ ಮಾರಾಟಗಾರರ ಸಹಿಗಳು ಅಲ್ಲ ಎಂದರೆ ಸರಿಯಲ್ಲ. ನಿಡಿ. 1 ರ ದೃಡೀಕೃತ ಪ್ರತಿಯನ್ನು ತೋರಿಸಿ ಅದರಲ್ಲಿ ಇರುವುದು ಹೆಸರಾ ಅಥವಾ ಸಹಿ ಎಂದರೆ ಸಾಕ್ಷಿ ಹೆಸರು ಮಾತ್ರ ಎನ್ನುತ್ತಾರೆ. ನಿಡಿ. 1 ರ ದಾಖಲೆಯಲ್ಲಿ ಎಲ್ಲಿಯೂ ಕೂಡ ಚನ್ನಮ್ಮ ರವರ ಹೆಬ್ಬಟ್ಟು ಗುರುತು ಇಲ್ಲ ಎಂದರೆ ಸರಿ. ನಾನು ಸಾಕ್ಷಿಯಾಗಿ ಸಹಿ ಮಾಡಿರುವ ಕ್ರಯ ಪತ್ರ ರಿಜಿಸ್ಟಾರ್ ಆಗಿತ್ತೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ರಿಜಿಸ್ಟರ್ ಆಗುವ ಕಾಲಕ್ಕೆ ನಾನು ಸಹಿ ಮಾಡಿದ್ದು ಎನ್ನುತ್ತಾರೆ. ನಿಡಿ. 53 ರ ಕ್ರಯಪತ್ರ

ರಿಜಿಸ್ಟರ್ ಆಗಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಜೊತೆ ಷಾಮಿಲಾಗಿ ನಿಡಿ. 53 ರ ದಾಖಲೆಯನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರ 1997 ರ ದಾಖಲೆ ಅಲ್ಲ ಅದನ್ನು ನಂತರ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.